ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560002
080-22237455/22221286 comm@bbmp.gov.in

ಸಂಖ್ಯೆ: ಬಿ12(1)ಪಿಆರ್/394/2023-24 ದಿನಾಂಕ: 6.12.23

# ಕಛೇರಿ ಆದೇಶ

**ವಿಷಯ:** ಎಲ್ಲಾ ವಲಯ ಆಯುಕ್ತರು ಮತ್ತು ಅಧಿಕಾರಿಗಳಿಗೆಹಣಕಾಸು ಹಾಗೂ ತಾಂತ್ರಿಕ ವಿಷಯದ ಅಧಿಕಾರಪ್ರತ್ಯಾಯೋಜನೆ ಮಾಡುವ ಕುರಿತು.

**ಉಲ್ಲೇಖ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ-2020.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 112 ಎಂಎನ್‌ವೈ 2019, ದಿನಾಂಕ:16-09-2019, 29-06-2020 ಮತ್ತು 27-10-2020ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020, ಸೆಕ್ಷನ್ 64, 65, 66 ಮತ್ತು 67ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬಿ.ಬಿ.ಎಂ.ಪಿ. ಮುಖ್ಯ ಆಯುಕ್ತರ ಕಾರ್ಯದ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ 8 ವಲಯಗಳನ್ನು ಮುಖ್ಯ ಆಯುಕ್ತರ ಕಾರ್ಯ ಪರಿಧಿಯಿಂದ ಬಿಡುಗಡೆಗೊಳಿಸಿ ವಲಯ ಆಯುಕ್ತರು / ವಿಶೇಷ ಆಯುಕ್ತರುಗಳಿಗೆ ನೀಡಲಾಗಿರುತ್ತದೆ.

ಅದರಂತೆ, ಎಲ್ಲಾ ವಲಯದ ಹಾಗೂ ಕೇಂದ್ರ ಕಛೇರಿಯ ಹಣಕಾಸು ಮತ್ತು ಕಾಮಗಾರಿ ವಿಷಯಗಳಿಗೆ ಸಂಬಂಧಿಸಿದಂತೆ ವಲಯ ಆಯುಕ್ತರು / ವಿಶೇಷ ಆಯುಕ್ತರು ರವರುಗಳಿಗೆ ಮತ್ತು ಇತರೆ ಅಧಿಕಾರಿಗಳಿಗೆ ಹಂಚಿಕೆಯಾಗಿರುವ ಯಾವುದೇ ನಡವಳಿಕೆ ಕಡತಗಳನ್ನು ತರಿಸಿ, ಪರಿಶೀಲಿಸುವ ಮತ್ತು ಪರಿಷ್ಕರಿಸುವ ಅಧಿಕಾರವನ್ನು ಮುಖ್ಯ ಆಯುಕ್ತರು ಉಳಿಸಿಕೊಂಡು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಕಂಡ ರೀತ್ಯಾಅಧಿಕಾರ ಪ್ರತ್ಯಾಯೋಜನೆಯನ್ನು ಮಾಡಿ ಆದೇಶಿಸಿದೆ. ಈ ಕೆಳಕಂಡ ಅಧಿಕಾರಗಳು ಮುಂದೆ ಪರಿಷ್ಕರಿಸುವ, ಹಿಂತೆಗೆದುಕೊಳ್ಳುವ ಮತ್ತು ಮಾರ್ಪಾಟು ಮಾಡುವವರೆವಿಗೆ ಜಾರಿಯಲ್ಲಿರುತ್ತವೆ. ಈ ಅಧಿಕಾರ ಪ್ರತ್ಯಾಯೋಜನೆಯಲ್ಲಿ ಒಳಗೊಳ್ಳದೇ ಇರುವ ಅಧಿಕಾರಗಳು ಮುಖ್ಯ ಆಯುಕ್ತರ ವ್ಯಾಪ್ತಿಗೆ ಒಳಪಡುತ್ತವೆ.

## I. ಹಣಕಾಸಿನ ಪ್ರತ್ಯಾಯೋಜನೆ:

| ಕ್ರ.ಸಂ | ಪ್ರತ್ಯಾಯೋಜನೆ ವಿವರ | ವಿಶೇಷ ಆಯುಕ್ತರು (ಹಣಕಾಸು)/ | ವಿಶೇಷ ಆಯುಕ್ತರು (ಘನತ್ಯಾಜ್ಯ, ಕಂದಾಯ, ಶಿಕ್ಷಣ, ಆರೋಗ್ಯ ಮತ್ತು ಇತರೆ) | ವಲಯ ಆಯುಕ್ತರು | ಜಂಟಿ ಆಯುಕ್ತರು | ಮುಖ್ಯ ಅಭಿಯಂತರರು | ಮುಖ್ಯ ಲೆಕ್ಕಾಧಿಕಾರಿಗಳು |
|---|---|---|---|---|---|---|---|
| 1. | ಆಡಳಿತಾತ್ಮಕ ಅನುಮೋದನೆ ಹೊಂದಿರುವ ಕಾಮಗಾರಿಗಳಿಗೆ ಜಾಬ್ ಸಂಖ್ಯೆಯನ್ನು ನೀಡುವುದು | - | - | - | - | ಪಾಲಿಕೆ ಅನುದಾನಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಅಧಿಕಾರ | ಕೇಂದ್ರ / ರಾಜ್ಯ ಸರ್ಕಾರದ ಅನುದಾನಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಅಧಿಕಾರ |

| ಕ್ರ.ಸಂ | ಪ್ರತ್ಯಾಯೋಜನೆ ವಿವರ | ವಿಶೇಷ ಆಯುಕ್ತರು (ಹಣಕಾಸು)/ | ವಿಶೇಷ ಆಯುಕ್ತರು (ಘನತ್ಯಾಜ್ಯ, ಕಂದಾಯ, ಶಿಕ್ಷಣ, ಆರೋಗ್ಯ ಮತ್ತು ಇತರೆ) | ವಲಯ ಆಯುಕ್ತರು | ಜಂಟಿ ಆಯುಕ್ತರು | ಮುಖ್ಯ ಅಭಿಯಂತರರು | ಮುಖ್ಯ ಲೆಕ್ಕಾಧಿಕಾರಿಗಳು |
|---|---|---|---|---|---|---|---|
| 2 | ಎಲ್ಲಾ ಡಿ.ಸಿ. ಬಿಲ್ಲುಗಳ ಪಾವತಿಗೆ ಅನುಮೋದನೆ (GAD) | ರೂ.05.00 ಲಕ್ಷಗಳ ಮೇಲ್ಪಟ್ಟು (ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ | ರೂ.05.00 ಲಕ್ಷಗಳವರೆಗೆ (ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ | ರೂ.05.00 ಲಕ್ಷಗಳ ಮೇಲ್ಪಟ್ಟು ಸಂಪೂರ್ಣ ಅಧಿಕಾರ | ರೂ.05.00 ಲಕ್ಷಗಳವರೆಗೆ | ರೂ.01.00 ಲಕ್ಷಗಳವರೆಗೆ | ರೂ.05.00 ಲಕ್ಷಗಳವರೆಗೆ |
| 3. | ಹೊರಗುತ್ತಿಗೆ ಆಧಾರದ ವೇತನ ಪಾವತಿ ಹಾಗೂ GAD ಹೊರತುಪಡಿಸಿ ಇತರ ಡಿಸಿ ಬಿಲ್ಲುಗಳು (ಪ್ರತಿ ಪ್ರಕರಣಕ್ಕೆ) | ರೂ.5.00 ಲಕ್ಷಗಳಿಂದ ರೂ.50.00 ಲಕ್ಷಗಳವರೆಗೆ (ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ) | | ರೂ.05.00 ಲಕ್ಷಗಳ ಮೇಲ್ಪಟ್ಟು ಸಂಪೂರ್ಣ ಅಧಿಕಾರ | ರೂ.5.00 ಲಕ್ಷಗಳವರೆಗೆ | - | ರೂ.5.00 ಲಕ್ಷಗಳವರೆಗೆ (ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ) |
| 4. | ಎಲ್ಲಾ ಡಿ.ಸಿ. ಬಿಲ್ಲುಗಳ ಪಾವತಿ | - | - | ರೂ.15.00 ಲಕ್ಷಗಳ ಮೇಲ್ಪಟ್ಟು | ರೂ.15.00 ಲಕ್ಷಗಳವರೆಗೆ | - | ಪೂರ್ಣ ಅಧಿಕಾರ |
| 5. | ವಲಯ ಕಛೇರಿಗಳಿಗೆ) (EMD-FSD) ಮರುಪಾವತಿ ಸಂಪೂರ್ಣ ಅಧಿಕಾರ | ರೂ.25.00 ಲಕ್ಷಗಳ ಮೇಲ್ಪಟ್ಟು (ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ) | - | ರೂ.25.00 ಲಕ್ಷಗಳ ಮೇಲ್ಪಟ್ಟು | ರೂ.25.00 ಲಕ್ಷಗಳವರೆಗೆ | - | ರೂ.25.00 ಲಕ್ಷಗಳವರೆಗೆ (ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ) |
| 6. | ಕಾಮಗಾರಿ ಬಿಲ್ಲುಗಳ ಪಾವತಿ | - | - | - | - | ವಲಯ ಮಟ್ಟದಲ್ಲಿ ವಲಯ ಕಾಮಗಾರಿಗಳಿಗಾಗಿ ಸಂಪೂರ್ಣ ಅಧಿಕಾರ (ಪಾಲಿಕೆಯ ಅನುದಾನಕ್ಕೆ ಸಂಬಂಧಿಸಿದಂತೆ) (online) | - |

- ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುದಾನದ ಲಭ್ಯತೆಗನುಗುಣವಾಗಿ ಪಾವತಿಗಾಗಿ ಬಾಕಿ ಇರುವ ಬಿಲ್ಲುಗಳಿಗೆ ಪ್ರತೀ 03 ತಿಂಗಳಿಗೊಮ್ಮೆ ವಲಯಕ್ಕೆ ಕೇಂದ್ರ ಕಛೇರಿಯಿಂದ ಹಣ ಬಿಡುಗಡೆಗೊಳಿಸಲಾಗುವುದು. ಅದರಂತೆ ವಲಯ ಆಯುಕ್ತರು ತಮ್ಮ ಹಂತದಲ್ಲಿ ನಿವ□ಹಣೆ ಕಾಮಗಾರಿಗಳಿಗೆ ಬಿಲ್ಲುಗಳನ್ನು ನಿಯಮಾನುಸಾರ ಪಾವತಿಸುವುದು. ಹಾಗೆಯೇ, ಹಣ ಬಳಕೆ ಪ್ರಮಾಣಪತ್ರವನ್ನು ವಿಶೇಷ ಆಯುಕ್ತರು (ಹಣಕಾಸು) ರವರಿಗೆ ಸಲ್ಲಿಸುವುದು.

## II. ಕಾಮಗಾರಿ ವಿಭಾಗ:

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 615 ಎಂಎನ್‌ವೈ 2015, ದಿನಾಂಕ:01-03-2016 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಕಾಮಗಾರಿಗಳ ಟೆಂಡರ್‌ಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಈ ಕೆಳಕಂಡಂತೆ ಪ್ರತ್ಯಾಯೋಜಿಸಲಾಗಿದೆ.

### 1. ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ

| ಕ್ರ. ಸಂ. | ಮಂಜೂರಾತಿ ಪ್ರಾಧಿಕಾರ | ಪ್ರಸ್ತುತ ನೀಡಿರುವ ಆರ್ಥಿಕ ಅಧಿಕಾರ |
|---|---|---|
| 1. | ಮುಖ್ಯ ಆಯುಕ್ತರು | ರೂ. 1.00 ಕೋಟಿಗಳವರೆಗೆ |
| 2. | ಸ್ಥಾಯಿ ಸಮಿತಿ / ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ | ರೂ. 1.00 ಕೋಟಿಯಿಂದ 3.00 ಕೋಟಿಗಳವರೆಗೆ |
| 3. | ಪಾಲಿಕೆ ಸಭೆ | ರೂ. 3.00 ಕೋಟಿಯಿಂದ 10.00 ಕೋಟಿಗಳವರೆಗೆ |
| 4. | ಸರ್ಕಾರಕ್ಕೆ | ರೂ. 10.00 ಕೋಟಿಗಳು ಮೇಲ್ಪಟ್ಟು |

### 2. ಕಾಮಗಾರಿಗಳ ಟೆಂಡರ್ ಅನುಮೋದನೆ

| ಕ್ರ. ಸಂ. | ಮಂಜೂರಾತಿ ಪ್ರಾಧಿಕಾರ | ಪ್ರಸ್ತುತ ನೀಡಿರುವ ಆರ್ಥಿಕ ಅಧಿಕಾರ |
|---|---|---|
| 1. | ಮುಖ್ಯ ಆಯುಕ್ತರು | ರೂ. 1.00 ಕೋಟಿಗಳವರೆಗೆ<br>(ಶೇ. 8% ರಷ್ಟು ಸಿ.ಎಸ್.ಆರ್ ದರದವರೆಗೆ) |
| 2. | ಮುಖ್ಯ ಅಭಿಯಂತರರು (ಕೇಂದ್ರ ಕಛೇರಿ) | ರೂ.50.00 ಲಕ್ಷಗಳು (ಸಿ.ಎಸ್.ಆರ್ ದರಕ್ಕೆ) |
| 3. | ಸ್ಥಾಯಿ ಸಮಿತಿ / ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ | ರೂ. 1.00 ಕೋಟಿಯಿಂದ 3.00 ಕೋಟಿಗಳವರೆಗೆ<br>(ಶೇ. 12% ರಷ್ಟು ಸಿ.ಎಸ್.ಆರ್ ದರದವರೆಗೆ) |
| 4. | ಪಾಲಿಕೆ ಸಭೆ | ರೂ. 3.00 ಕೋಟಿಯಿಂದ 10.00 ಕೋಟಿಗಳವರೆಗೆ<br>(ಶೇ. 15% ರಷ್ಟು ಸಿ.ಎಸ್.ಆರ್ ದರದವರೆಗೆ) |
| 5. | ಸರ್ಕಾರಕ್ಕೆ | ರೂ. 10.00 ಕೋಟಿಗಳು ಮೇಲ್ಪಟ್ಟು |

**A.** ವಲಯ ಆಯುಕ್ತರು / ವಿಶೇಷ ಆಯುಕ್ತರು, ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರುಗಳಿಗೆ ಕಾಮಗಾರಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ, ಕರಡು ಟೆಂಡರ್ ಅನುಮೋದನೆ ಮತ್ತು ಟೆಂಡರ್ ಅನುಮೋದನೆ ನೀಡುವ ಅಧಿಕಾರ ಪ್ರತ್ಯಾಯೋಜನೆ

**1. ಆಡಳಿತಾತ್ಮಕ ಅನುಮೋದನೆ: ಮುಖ್ಯ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆ**

| ಕ್ರ. ಸಂ. | ಮಂಜೂರಾತಿ ಪ್ರಾಧಿಕಾರ | ಆಡಳಿತಾತ್ಮಕ ಅನುಮೋದನೆ ಅಧಿಕಾರ |
|---|---|---|
| 1. | ವಲಯ ಆಯುಕ್ತರು / ವಿಶೇಷ ಆಯುಕ್ತರು (ಯೋಜನೆ) | ರೂ. 100.00 ಲಕ್ಷಗಳವರೆಗೆ<br>(Work decided at zonal level) |

- ಪಾಲಿಕೆಯ ಪೂರ್ಣ ಪ್ರಮಾಣದಲ್ಲಿ ಸ್ವೀಕರಿಸಿದ ಠೇವಣಿ ಮೊತ್ತದಲ್ಲಿ ಕೈಗೊಳ್ಳುವ ಕಾಮಗಾರಿಗಳ (ಸಂಬಂಧಪಟ್ಟ ಸಂಸ್ಥೆಯು ಮೇಲುರುಜು ಮಾಡಿದ ಅಂದಾಜು ಪಟ್ಟಿಗಳು) ಅಂದಾಜು ಮೊತ್ತ ರೂ. 100.00 ಲಕ್ಷದವರೆಗೆ ವಲಯ ಆಯುಕ್ತರು ಆಡಳಿತಾತ್ಮಕ ಅನುಮೋದನೆ ನೀಡುವುದು.
- ಸರ್ಕಾರ, ಪಾಲಿಕೆ ಸಭೆ, ಸಂಬಂಧಪಟ್ಟ ಸ್ಥಾಯಿ ಸಮಿತಿಗಳು, ಆಯುಕ್ತರು, ಮತ್ತು ಮುಖ್ಯ ಅಭಿಯಂತರರುಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದ ಪ್ರಕರಣಗಳಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳು ಎಲ್ಲಾ ಮೊತ್ತದ ಅಂದಾಜು ಮೊತ್ತಗಳಿಗೆ ಆಡಳಿತಾತ್ಮಕ ಅನುಮೋದನೆ ಆದೇಶ (Administrative Memo) ಹೊರಡಿಸುವುದು.
- ವಲಯ ಕಾಮಗಾರಿ, ಯೋಜನೆ, ವಿದ್ಯುತ್, ತೋಟಗಾರಿಕೆ, ಅರಣ್ಯ ಇಲಾಖೆಗಳ ಸಂಪೂರ್ಣ ಮೇಲ್ವಿಚಾರಣೆಯನ್ನು ಸಂಬಂಧಪಟ್ಟ ವಲಯದ ಮುಖ್ಯ ಅಭಿಯಂತರರು ವಹಿಸತಕ್ಕದ್ದು.
- ಮುಖ್ಯ ಅಭಿಯಂತರರುಗಳು ಕಾಮಗಾರಿಗಳ ಜಾಬ್‌ಕೋಡ್ ನೀಡುವ ಕಡತಗಳನ್ನೊಳಗೊಂಡಂತೆ ಎಲ್ಲಾ ಕಡತಗಳನ್ನು ನೇರವಾಗಿ ವಲಯ ಆಯುಕ್ತರುಗಳಿಗೆ ಸಲ್ಲಿಸಲು ಪ್ರತ್ಯಾಯೋಜಿಸಲಾಗಿದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯದಲ್ಲಿ ನಿರ್ವಹಣೆ ಕಾಮಗಾರಿಗಳಿದ್ದು, ಸದರಿ ಲೆಕ್ಕಶೀರ್ಷಿಕೆಯು ಈ ಕೆಳಗಿನಂತಿದ್ದು, ಸದರಿ ಲೆಕ್ಕ ಶೀರ್ಷಿಕೆಯಲ್ಲಿ ವಲಯ ಆಯುಕ್ತರು ತಮ್ಮ ಹಂತದಲ್ಲಿ ಹಂಚಿಕೆ ಅನುದಾನದ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ರೂಪಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.

| Sl No. | Department | Budget Code | Particulars |
|---|---|---|---|
| 1 | Zone | 05-220401 | Maintenance of all zonal buildings – P0595, P1958, P3804, P3668, P3628 |
| 2 | Zone | 05-220401 | Maintenance of Nethaji Subhash Chandra Bose/ PUB and Town Hall – P1785, P3245, P2196 |
| 3 | Zone | 05-220404 | M&R of BBMP Markets Buildings – P0462, P0494, P0375 |
| 4 | Zone | 05-220405 | M&R of School and College Buildings ESCROW account – P3285, P3272, P0475 |
| 5 | Zone | 05-220406 | M&R of Primary Health center – P3572 |
| 6 | Zone | 05-220406 | M&R of Hospitals, Maternity Homes, Dispensary & Doctors Qtrs./ Clinical Laboratories P0979, P2155 |
| 7 | Zone | 05-220410 | Repairs & Maintenance Buildings slaughter Houses/ Abattoir – P2166 |
| 8 | Zone | 05-220610 | Zonal POW Works - Annual Maintenance of Roads Footpath and Drains in Ward jurisdiction -Escrow Account -P3726 {Rs. 75 Lakhs per ward for 243 wards [Desilting & Maintenance Rs.30 lakhs, Pot hole filling Rs.15 Lakhs, Footpath Maintenance Rs.25 Lakhs, Temporary Monsoon Control Room Rs.5 Lakhs each ward] (After deducting Rs. 8505 of POT HOLE FILLING, DESILTING, MONSOON CONTROL ROOM which are paid through DC Bill) (243*25=6075) |
| 9 | Zone | 05-220801 | Water supply (Annually for Maintenance and Repairs – P1802, P3477 |
| 10 | Electrical | 05-220503 | M&R to Burial Grounds and Burning Ghats/ Electrical crematorium – P0486, P3240, P3258 |
| 11 | Electrical | 05-220902 | M&R Street Lights – Replacement of Burnt Bulbs etc., (Package) – ESCROW Account – P0300 |
| 12 | Electrical | 05-221501 | Maintenance of Community Hall (Electrical 32 Community Halls) – P3254 |
| 13 | Electrical | 05-221501 | M&R to Electrical Installation in BBMP Buildings, Schools, M.Homes, Community Halls, Markets & others – P0294 |
| 14 | Electrical | 05-221501 | M&R to Electrical Installation in Parks and Gardens, Playgrounds – P0298 |
| 15 | Electrical | 05-221501 | M&R to Pump Sets, Lifts, DG Sets, Wireless Sets and Internal Telephone Exchange – P0303 |
| 16 | Electrical | 05-221501 | M&R to Electrical Crematorium – P0287 |
| 17 | Zone | 05-220407 | Repairs and Maintenance of BBMP Quarters – P3388, P3791, P3476 |
| 18 | Zone | 05-220415 | Repairs and Maintenance – Buildings Kennels, Cattle Pounds and Animal Birth Control Centers – P3229, P3570 |
| 19 | Health | 05-220406 | M & R of Primary Health Centres P3572 |

- ಕೇಂದ್ರ ಕಛೇರಿಯಲ್ಲಿನಿರ್ವಹಣೆ ಕಾಮಗಾರಿಗೆ ಸಂಬಂಧಿಸಿದಂತೆ (ಕೇಂದ್ರ ಎಂ.ಪಿ.ಇ.ಡಿ., ಕಾಮಗಾರಿ ಹೊರತುಪಡಿಸಿ) ಕ್ರಿಯಾ ಯೋಜನೆಯನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ತಯಾರಿಸಿ ಹಂಚಿಕೆ ಅನುದಾನ ಅನುಗುಣವಾಗಿ ಮಾದರಿ ಟೆಂಡರ್ ದಸ್ತಾವೇಜನ್ನು ತಯಾರಿಸಿ ವಲಯ ಮಟ್ಟದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಟೆಂಡರ್ ಅನ್ನು ಅಹ್ವಾನಿಸಿ, ಅಗತ್ಯ ಕ್ರಮವಹಿಸುವುದು.

| Sl No. | Department | Budget Code | Particulars |
|---|---|---|---|
| 1 | Lakes | 05-221802 | Lake Maintenance Expenses – (ESCROW Account) including STP Maitenance – P3028 |
| 2 | Storm Water Drain | 05-220702 | Repairs and Annual Maintenance of Strom Water Drain – ESCROW Account – P3607 |
| 3 | Road Infrastructure | 05-220602 | Maintenance of Arterial and Sub-Arterial Roads in Road Infrastructure Division in all the 8 zones of BBMP – ESCROW Account – P2902 |
| 4 | Road Infrastructure | 05-220603 | Maintenance of Roads Flyovers/ Subways/ ROB RUB- ESCROW Account – P1924, P3180 |

## 2. ಟೆಂಡರ್ ಅನುಮೋದನೆ

| ಕ್ರ. ಸಂ. | ಆರ್ಥಿಕ ಅಧಿಕಾರದ ಮಿತಿ | ಟೆಂಡರ್ ಅನುಮೋದಿಸುವ ಪ್ರಾಧಿಕಾರ |
|---|---|---|
| 1. | ರೂ. 50.00 ಲಕ್ಷಗಳಿಂದ ರೂ. 100.00 ಲಕ್ಷಗಳವರೆಗೆ (ಶೇ. 3% ರಷ್ಟು ಸಿ.ಎಸ್.ಆರ್ ದರದವರೆಗೆ) | ವಲಯ ಆಯುಕ್ತರು |
| 2. | ರೂ.50.00 ಲಕ್ಷಗಳವರೆಗೆ (ಸಿ.ಎಸ್.ಆರ್ ದರದವರೆಗೆ) | ಮುಖ್ಯ ಅಭಿಯಂತರರು |

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರುಗಳಿಗೆ,

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಆಡಳಿತ)/ (ಹಣಕಾಸು / ಯೋಜನೆ / ಆರೋಗ್ಯ / ಕಂದಾಯ / ಆಸ್ತಿಗಳು / ಕಲ್ಯಾಣ/ ಘನತ್ಯಾಜ್ಯ ನಿರ್ವಹಣೆ) ರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
3. ಎಲ್ಲಾ ವಲಯ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ರಾಜರಾಜೇಶ್ವರಿನಗರ, ಯಲಹಂಕ, ದಾಸರಹಳ್ಳಿ, ಮಹದೇವಪುರ, ಬೊಮ್ಮನಹಳ್ಳಿ) ರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
4. ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ರಾಜರಾಜೇಶ್ವರಿನಗರ, ಯಲಹಂಕ, ದಾಸರಹಳ್ಳಿ, ಮಹದೇವಪುರ, ಬೊಮ್ಮನಹಳ್ಳಿ) ರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
5. ಅಪರ ಆಯುಕ್ತರು (ಹಣಕಾಸು) ರವರಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.

6. ಎಲ್ಲಾ ಜಂಟಿ ಆಯುಕ್ತರು / ಉಪ ಆಯುಕ್ತರುಗಳಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
7. ಪ್ರಧಾನ ಅಭಿಯಂತರರು ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ನಗರಯೋಜಕರು / ಅಪರ ನಿರ್ದೇಶಕರು (ನಗರಯೋಜನೆ) / ಜಂಟಿ ನಿರ್ದೇಶಕರು (ನಗರಯೋಜನೆ) / ಉಪ ನಿರ್ದೇಶಕರು (ನಗರಯೋಜನೆ) / ಸಹಾಯಕ ನಿರ್ದೇಶಕರು (ನಗರಯೋಜನೆ) ರವರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಎಲ್ಲಾ ಮುಖ್ಯ ಅಭಿಯಂತರರು ಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
10. ಎಲ್ಲಾ ಅಧೀಕ್ಷಕ ಅಭಿಯಂತರರು ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
11. ಮುಖ್ಯ ಆರೋಗ್ಯಾಧಿಕಾರಿ /ಆರೋಗ್ಯಾಧಿಕಾರಿಗಳು ಉಪ ಆರೋಗ್ಯಧಿಕಾರಿಗಳು / ಎಲ್ಲಾ ಆರೋಗ್ಯ ವೈದ್ಯಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
12. ಉಪ ನಿರ್ದೇಶಕರು (ತೋಟಗಾರಿಕೆ)/ ಎಲ್ಲಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
13. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
14. ಜಂಟಿ ನಿರ್ದೇಶಕರು (ಪಶುಪಾಲನೆ) / ಸಹಾಯಕ ನಿರ್ದೇಶಕರು (ಪಶುಪಾಲನೆ) ರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
15. ಕೌನ್ಸಿಲ್ ಕಾರ್ಯದರ್ಶಿಯವರಿಗೆ / ಅಪರ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
16. ಎಲ್ಲಾ ವಲಯ ಉಪ ನಿಯಂತ್ರಕರು (ಹಣಕಾಸು) / ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
17. ಉಪ ನಿರ್ದೇಶಕರು (ಸಾರ್ವಜನಿಕ ಶಿಕ್ಷಣ) / ಹಿರಿಯ ನಿರ್ದೇಶಕರು (ಸಾರ್ವಜನಿಕ ಶಿಕ್ಷಣ) / ಸಹಾಯಕ ವಿದ್ಯಾಧಿಕಾರಿ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
18. ಎಲ್ಲಾ ಕಂದಾಯ ಅಧಿಕಾರಿಗಳು / ಉಪ ಕಂದಾಯ ಅಧಿಕಾರಿಗಳು / ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
19. ಎಲ್ಲಾ ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
20. ಎಲ್ಲಾ ಇಲಾಖಾ ಮುಖ್ಯಸ್ಥರು / ಬಟವಾಡೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
21. ಕಛೇರಿ ಕಡತಕ್ಕೆ.